







ಹೊರಸುತ್ತಿನ ನಾಲ್ಕೂ ಗೋಡೆಗಳ ಮೇಲೆ ಸಿಂಹ, ದೇವ–ದೇವಿಯರ ಸುಂದರ ಕೆತ್ತನೆಗಳಿವೆ.

## ಮಹಿಷಮರ್ದಿನಿ ಮಂಟಪ

ಆರು ಕಂಬಗಳಿರುವ ಕಲ್ಲಿನ ಮಂಟಪದ ಗೋಡೆಗಳ ಮೇಲೆ ಸೋಮ ಸ್ಕಂದ, ಮಹಿಷಾಸುರನನ್ನು ಮರ್ದಿಸುವ ಮಹಿಷಮರ್ದಿನಿ ಮತ್ತು ಅನಂತಶಾಹಿ ವಿಷ್ಣುವಿನ ಕೆತ್ತನೆಯಿದೆ. ಸಿಂಹದ ಮುಖದಲ್ಲಿ ಕಾಣುವ ಸಿಟ್ಟು, ದೇವಿಯ ಮುಖದಲ್ಲಿ ಗೆದ್ದ ಭಾವ, ಮಹಿಷಾಸುರನ ಮುಖದಲ್ಲಿ ಕ್ರೌರ್ಯ ಸ್ಪಷ್ಟವಾಗಿ ಎದ್ದುಕಾಣುತ್ತದೆ.

## ಕಲ್ಲಿನ ಗಣೇಶ ಮಂದಿರ

8ನೇ ಶತಮಾನದಲ್ಲಿ ನಿರ್ಮಿಸಿರುವ ಈ ಮಂದಿರವು ಆಯಾತಾಕಾರವಾಗಿದ್ದು, ರಥ ಮಂದಿರದಲ್ಲಿರುವಂತೆ ನಾಲ್ಕೈದು ಅಂತಸ್ತಿನ ಶಿಖರವಿದೆ.

ಕೃಷ್ಣನ ಗುಹಾ ಮಂದಿರ ಮಹಾಬಲಿಪುರಂನ ಮತ್ತೊಂದು ನೋಡಲೇಬೇಕಾದ ಸ್ಥಳ. ಕೃಷ್ಣ ಗೋವರ್ಧನ ಗಿರಿಯನ್ನು ಹಿಡಿದೆತ್ತಿ ಜನರನ್ನು, ಪ್ರಾಣಿಗಳನ್ನು ಸುರಿಯುತ್ತಿರುವ ಮಳೆಯಿಂದ ರಕ್ಷಿಸಿದ ಘಟನೆ, ಗೊಲ್ಲರ ಚಿತ್ರ, ಹಸುಕರುಗಳು ಮತ್ತು ಕೃಷ್ಣ ಕೊಳಲನೂದುವ ಚಿತ್ರಗಳನ್ನು ಗುಹೆಯ ಬಂಡೆಯ ಮೇಲೆ ಕೆತ್ತಿದ್ದಾರೆ. ಕೆಲವು ಹಸು ಮತ್ತು ಎತ್ತಿನ ಆಕಾರಗಳು ವಾಸ್ತವಿಕದಷ್ಟೇ ದೊಡ್ಡದಾಗಿವೆ.

ಬಂಡೆಯ ಮೇಲೆ ಚೆಂಡಿನ ಆಕಾರದಲ್ಲಿರುವ ಕಲ್ಲೊಂದು ತುದಿಯಂಚಿನಲ್ಲಿ ಸಾವಿರಾರು ವರ್ಷಗಳಿಂದ ನಿಂತಿದೆ. ಮುಟ್ಟಿದರೆ ಈಗಲೋ ಆಗಲೋ ಬೀಳುವಂತಿರುವ ಇದರ ಸುತ್ತಮುತ್ತ ಎಲ್ಲರೂ ಫೋಟೋ ತೆಗೆಸಿಕೊಳ್ಳುವವರೇ.

‘ಅರ್ಜುನನ ತಪಸ್ಸು’ ಎನ್ನುವುದು ಕ್ಯಾನ್ವಾಸಿನ ಮೇಲೆ ಚಿತ್ರಿಸಿದಂತೆ ತೋರುವ, ಎರಡು ಹೆಬ್ಬಂಡೆಗಳ ಮೇಲೆ ಮಾಡಿದ ಕೆತ್ತನೆಯಾಗಿದೆ. ಪರ್ವತಗಳು, ಸೂರ್ಯ, ಚಂದ್ರ, ನೂರಕ್ಕೂ ಅಧಿಕ ದೇವ, ದಾನವ, ನಾಗ, ಸನ್ಯಾಸಿಗಳ ಮತ್ತು ಪ್ರಾಣಿ–ಪಕ್ಷಿಗಳ ಚಿತ್ರಗಳಿವೆ. ಇದು ವಿಶ್ವದಲ್ಲೇ ಅತೀ ದೊಡ್ಡ ಉಬ್ಬು ಕೆತ್ತನೆಯಂತೆ. ಇದರಲ್ಲಿರುವ ಆನೆಗಳ ಆಕಾರವು ವಾಸ್ತವಿಕದಲ್ಲಿರುವಷ್ಟೇ ದೊಡ್ಡದಾಗಿವೆ. ಒಂದು ಕಾಲದಲ್ಲಿ ಬಂಡೆಯ ಮೇಲೆ ನೀರಿನ ಟ್ಯಾಂಕಿದ್ದು ಬಂಡೆಯ ಮೇಲೆ ನೀರನ್ನು ಹರಿಸುತ್ತಿದ್ದರಂತೆ. ಕೆಲವರು ಭಗೀರಥ ತಪಸ್ಸು ಮಾಡಿ ಸ್ವರ್ಗದಿಂದ ಗಂಗೆಯನ್ನು ಶಿವನ ಜಟೆಯ ಮೂಲಕ ಭೂಮಿಗೆ ತಂದ ಚಿತ್ರಣವಿದು ಎಂದರೆ, ಮತ್ತೆ ಕೆಲವರು ಅರ್ಜುನ ಪಾಶುಪತಾಸ್ತ್ರ ಪಡೆಯಲು ಮಾಡಿದ ತಪದ ಕಥೆ ಹೇಳುತ್ತಾರೆ.

## ಸಮುದ್ರ ತೀರದ ಮಂದಿರ

ರಥ ಮಂದಿರಗಳು ಒಂದೇ ಕಲ್ಲಿನಲ್ಲಿ ಕಡಿದು ಮಾಡಿದ ಮಂದಿರವಾಗಿದ್ದರೆ, ಗುಹಾ ಮಂದಿರಗಳು ಹೆಬ್ಬಂಡೆಯನ್ನು ಗುಹೆಯ ಆಕಾರದಲ್ಲಿ ಕೊರೆದು ಮಾಡಿದ ಮಂದಿರಗಳು. ಆದರೆ, ಸಮುದ್ರ ತೀರದ ಮಂದಿರಗಳು ಕಲ್ಲಿನ ಚೌಕಗಳನ್ನು ಜೋಡಿಸಿ ಮಾಡಿದವು. ದ್ರಾವಿಡ ಶೈಲಿಯಲ್ಲಿರುವ ಈ ಮಂದಿರಗಳು ದಕ್ಷಿಣ ಭಾರತದ ಅತೀ ಪುರಾತನ ಮಂದಿರಗಳ ಸಾಲಿಗೆ ಸೇರಿವೆ ಎನ್ನಲಾಗಿದೆ. ಎರಡು ಸುತ್ತಿನ ಕಲ್ಲಿನ ಕಾಂಪೌಂಡಿದ್ದು, ಮೇಲೆ ಸಾಲಾಗಿ ನಂದಿಯ ಮೂರ್ತಿಗಳಿವೆ, ಆದರೆ ಹೆಚ್ಚಿನವು ಭಗ್ನಗೊಂಡಿವೆ. ಕಾಂಪೌಂಡಿನ ಒಳಗೆ ಒಂದು ವಿಷ್ಣುವಿನ ಮಂದಿರವಾದರೆ, ಪಕ್ಕದಲ್ಲಿ ಎರಡು ಶಿವನ ಮಂದಿರಗಳಿವೆ. ಶಿವನ ಮಂದಿರಗಳಿಗೆ ಅಷ್ಟಭುಜಾಕೃತಿಯ ಶಿಖರವಿದ್ದು, ವಿಷ್ಣುವಿನ ಮಂದಿರಕ್ಕೆ ಶಿಖರವಿಲ್ಲ.

ಸಮುದ್ರ ತೀರದ ಮಂದಿರವು ಕಾಲಾಂತರದಲ್ಲಿ ಸಮುದ್ರದ ಮರಳಿನಲ್ಲಿ ಹುಗಿದು ಹೋಗಿದ್ದು ಮತ್ತೆ ಅದನ್ನು ಸ್ಥಾಪಿಸಿದಂತಿದೆ. ಸಂಕೀರ್ಣದಲ್ಲಿ ಹಲವು ಪೀಠಗಳಿದ್ದು, ಅವುಗಳ ಮೇಲಿದ್ದಿರಬಹುದಾದ ಮೂರ್ತಿಗಳು ಕಾಣೆಯಾಗಿವೆ.

ಮಹಾಬಲಿಪುರಂನ ಎಲ್ಲ ಸ್ಮಾರಕಗಳು 3–4 ಕಿ.ಮೀ. ವ್ಯಾಪ್ತಿಯಲ್ಲಿವೆ. ಸಮುದ್ರದ ಹಿನ್ನೆಲೆಯಲ್ಲಿ ಮಂದಿರಗಳ ಕಲಾಸಾಗರವನ್ನು ಕಣ್ತುಂಬಿಕೊಳ್ಳುವುದು ಅಪೂರ್ವ ಅನುಭವ ನೀಡಬಲ್ಲದು. ■